**<u>3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.</u>**

**<u>ಎಸ್.ಸಿ. ಸಂಖ್ಯೆ: 124/2012</u>**
**<u>C/W</u>**
**<u>ಎಸ್.ಸಿ. ಸಂಖ್ಯೆ: 116/2013</u>**

ದಿನಾಂಕ: 24.08.2022
(ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು)

ಚಾಸಾ - 21 ಪ್ರಾಸಾ - 3

| | | |
|---|---|---|
| ಹೆಸರು | : | ಏಕಾಂಬರೇಶ್ವರ್ |
| ತಂದೆಯ ಹೆಸರು | : | ಕೆ.ಎಂ.ನಾಗರಾಜು |
| ವಯಸ್ಸು | : | 49 ವರ್ಷ |
| ಉದ್ಯೋಗ | : | ಎಎಸ್ಐ, ಬಿಡದಿ ಪೊಲೀಸ್ ಠಾಣೆ |
| ವಾಸಸ್ಥಳ | : | ಬಿಡದಿ |

**<u>ಮುಖ್ಯವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:</u>**

ನಾನು 2008 ರಿಂದ 2015 ರವರೆಗೆ ತಾವರೆಕೆರೆ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕೆಲಸ ಮಾಡಿದ್ದೆ.

2. ದಿನಾಂಕ 18.08.2010 ರಂದು ಪಿಐ ರವರು ಆರೋಪಿಗಳ ಪತ್ತೆಗಾಗಿ ನನ್ನನ್ನು ಹಾಗು ಇತರ ಸಿಬ್ಬಂದಿಗಳನ್ನು ನೇಮಿಸಿದ್ದರು. ಘಟನೆಗೆ ಸಂಬಂಧಪಟ್ಟ ಮೃತನ ಮೊಬೈಲ್‌ನ್ನು ಆರೋಪಿತರು ಉಪಯೋಗಿಸುತ್ತಿದ್ದಾರೆ ಎಂದು ಮಾಹಿತಿ ಇತ್ತು. ಆ ಮಾಹಿತಿ ಆಧಾರದ ಮೇಲೆ ಆರೋಪಿತರನ್ನು ಬಂಧಿಸಬೇಕೆಂದು ನಿರ್ದೇಶನವಿತ್ತು. ಅದೇ ದಿನ ಸುಮ್ಮನಹಳ್ಳಿ ಬಸ್ ನಿಲ್ದಾಣದ ಬಳಿ ಆರೋಪಿ ವಿಜಯಕುಮಾರ್‌ರವರು ಮೃತನ ಮೊಬೈಲ್

ಉಪಯೋಗಿಸುತ್ತಿದ್ದುದ್ದು ಗೊತ್ತಾಯಿತು. ಆಗ ಆರೋಪಿ ಈತನೇ ಎಂದು ಮನದಟ್ಟು ಮಾಡಿಕೊಂಡು ಮಧ್ಯಾಹ್ನ 12.30 ಕ್ಕೆ ವಶಕ್ಕೆ ಪಡೆದುಕೊಂಡೆವು.

3. ಆತನನ್ನು ವಿಚಾರಿಸಿದಾಗ ದಿನಾಂಕ 07.08.2010 ರಂದು ರಾತ್ರಿ 11.30 ಗಂಟೆಯಲ್ಲಿ ಆರೋಪಿತರು 4 ಜನ ಸೇರಿ ನಾಗರಾಜು ಎನ್ನುವ ವ್ಯಕ್ತಿಯನ್ನು ಕೊಲೆ ಮಾಡಿದ್ದೇವೆ ಮತ್ತು ಆತನ ಬಳಿ ಇದ್ದ ರೂ.500/- ಹಣವನ್ನು ಕಿತ್ತುಕೊಂಡು ಮತ್ತು ಮೊಬೈಲ್‌ನ್ನು ಕೂಡ ಕಿತ್ತುಕೊಂಡೆವು ಎಂದು ನಮ್ಮ ಮುಂದೆ ಹೇಳಿದ್ದರಿಂದ ಅವರನ್ನು ಕರೆದುಕೊಂಡು ಬ್ಯಾಡರಹಳ್ಳಿ ಹೊರ ಪೊಲೀಸ್ ಠಾಣೆಗೆ ಕರೆದುಕೊಂಡು ಹೋದೆವು. ಅಲ್ಲಿ ಪಿಐ ರವರ ಮುಂದೆ ಹಾಜರುಪಡಿಸಿದೆವು.

4. ಆ ದಿನ ವಶಪಡಿಸಿಕೊಂಡ ವ್ಯಕ್ತಿ ಈ ದಿನ ನ್ಯಾಯಾಲಯದ ಮುಂದೆ ಹಾಜರಿರುವುದಿಲ್ಲ. ಈ ಬಗ್ಗೆ ಹೇಳಿಕೆ ನೀಡಿರುತ್ತೇನೆ.

<u>ಪಾಟೀಸವಾಲುಃ ಶ್ರೀ.ಕೆ.ತಿಮ್ಮೇಗೌಡ ವಕೀಲರಿಂದಃ ಆರೋಪಿತರ ಪರವಾಗಿಃ</u>-

5. ನನಗೆ ಪಿಐ ರವರು ಲಿಖಿತ ಆದೇಶ ನೀಡಿದ್ದಿಲ್ಲ. ನಾನು ಯಾವುದೇ ಆರೋಪಿತರನ್ನು ಬಂಧಿಸಿಲ್ಲ ಮತ್ತು ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಮೊಬೈಲ್‌ನ ವಿವರಗಳು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಅದರ ಐಎಂಇಐ ನಂಬರ್ ನನಗೆ ಗೊತ್ತಿಲ್ಲ. ಆ ಬಸ್ ನಿಲ್ದಾಣದಲ್ಲಿ ಯಾವಾಗಲೂ ಜನರಿರುತ್ತಾರೆ

ಎಂದರೆ ಸರಿ. ಆರೋಪಿತರ ರೇಖಾ ಚಿತ್ರ ಮತ್ತು ಭಾವಚಿತ್ರ, ಅವರ ಗುರುತು ಪತ್ತೆಗಾಗಿ ಇರಲಿಲ್ಲ.

6. ಮೊಬೈಲ್ ಸಿಮ್ ನಂಬರ್ ನನಗೆ ಗೊತ್ತಿಲ್ಲ. ನಾನು ಆ ಸ್ಥಳಕ್ಕೆ ಹೋಗಿಲ್ಲ ಮತ್ತು ಆರೋಪಿತರನ್ನು ಬಂಧಿಸಿಲ್ಲ ಎಂದರೆ ಸರಿಯಲ್ಲ. ಮೊಬೈಲ್ ಮತ್ತು ಸಿಮ್‌ನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ದೇವರಾಜ ಭಟ್ಟ ಎಂ.)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.